# ಅಂಜುಮನ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ ಭಟ್ಕಳ

## ಅಂಜುಮನ್ ಮಹಾವಿದ್ಯಾಲಯದಿಂದ "ಸ್ವಚ್ಛ ಸಾಗರ್, ಸುರಕ್ಷಿತ ಸಾಗರ್" ಬೃಹತ್ ಕಾರ್ಯಕ್ರಮದ ಒಂದು ವರದಿ

ಮಿನಿಸ್ಟ್ರಿ ಆಫ್ ಯುಥ್ ಅಫಿಯರ್ಸ್ ಅಂಡ್ ಸ್ಪೋರ್ಟ್ಸ್ ಇವರ ನಿರ್ದೇಶನದಂತೆ ಅಂಜುಮನ್ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕ ಮತ್ತು ಎನ್.ಸಿ.ಸಿ. ಘಟಕವು ಕಾಲೇಜಿನ ಎಲ್ಲ ಅಧ್ಯಾಪಕರನ್ನು ಮತ್ತು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು, ಮಾವಿನಕೂರ್ವೆ ಗ್ರಾಮಪಂಚಾಯತದ ಸಹಕಾರದೊಂದಿಗೆ ಭಟ್ಕಳದ ಬಂದರದ ಸಮೀಪದ ಮಾವಿನಕುರ್ವೆ ಕಡಲ ತೀರವನ್ನು ಸ್ವಚ್ಛಗೊಳಿಸುವುದರ ಮೂಲಕ 'ಸ್ವಚ್ಛ ಸಾಗರ, ಸುರಕ್ಷಿತ ಸಾಗರ' ಕಾರ್ಯಕ್ರಮವನ್ನು ಯಶಸ್ವಿಯಾಗಿ ಮತ್ತು ಅರ್ಥಪೂರ್ಣವಾಗಿ ನೆರವೇರಿಸಿತು.

'ಸ್ವಚ್ಛತಾ ಹಿ ಸೇವಾ' ಅಥವಾ 'ಸ್ವಚ್ಛತೆಯೇ ಸೇವೆ' ಪಾಕ್ಷಿಕದ ಕೊನೆಯ ದಿನವಾದ ಇಂದು(02–10–2024) ಕಾಲೇಜಿನ ಎನ್.ಎಸ್.ಎಸ್ ಮತ್ತು ಎನ್.ಸಿ.ಸಿ. ಸ್ವಯಂಸೇವಕರು ಹಾಗೂ ಉಳಿದ ವಿದ್ಯಾರ್ಥಿಗಳ ಜೊತೆ ಅಧ್ಯಾಪಕವರ್ಗ ಮತ್ತು ಸಿಬ್ಬಂದಿಗಳೆಲ್ಲ ಈ ಬೃಹತ್ ಕಾರ್ಯಕ್ರಮದಲ್ಲಿ ಸೇರಿಕೊಂಡು ಕಡಲ ತೀರದಲ್ಲಿ ಎಲ್ಲೆಂದರಲ್ಲಿ ರಾಶಿಯಾಗಿ ಬಿದ್ದ ಪ್ಲಾಸ್ಟಿಕ್ ತ್ಯಾಜ್ಯಗಳನ್ನು. ಇನ್ನಿತರ ಕಸಗಳನ್ನು ತೆಗೆದು ಸ್ವಚ್ಛಗೊಳಿಸುವರ ಮೂಲಕ ಸಮುದ್ರತೀರವನ್ನು ಸುಂದರಗೊಳಿಸಿದರು.

ನಮ್ಮ ಮಹಾವಿದ್ಯಾಲಯದ ಜೊತೆಗೆ ಮಾವಿನಕುರ್ವೆ ಗ್ರಾಮಪಂಚಾಯತವೂ ಈ ಕಾರ್ಯಕ್ರಮದಲ್ಲಿ ಸೇರಿಕೊಂಡಿರುವುದರಿಂದ ಈ ಸ್ವಚ್ಛತಾ ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಮೆರುಗು ಪ್ರಾಪ್ತವಾಯಿತು. ಮಾವಿನಕುರ್ವೆ ಗ್ರಾಮಪಂಚಾಯತ ನೀಡಿದ ಸಂಪೂರ್ಣ ಸಹಕಾರದಿಂದಾಗಿ ಈ 'ಕ್ಲೀನ್ ಸೀ, ಸೇಫ್ ಸೀ' ಕಾರ್ಯಕ್ರಮ ಇನ್ನೂ ಹೆಚ್ಚು ಯಶಸ್ವಿಯಾಯಿತು.

ಒಬ್ಬ ವಿದ್ಯಾರ್ಥಿಗೆ ನಿಗದಿಪಡಿಸಿದ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ವಿದ್ಯಾರ್ಥಿಗಳೆಲ್ಲ ಕಡಲ ತೀರದ ಕಸವನ್ನು ಸಂಗ್ರಹಿಸಿದರು. ಸಂಗ್ರಹಿಸಿದ ಕಸವನ್ನು ವಿಲೇವಾರಿ ಮಾಡಿಸುವ ಕೆಲಸವನ್ನು ಮಾವಿನಕುರ್ವೆ ಗ್ರಾಮಪಂಚಾಯತದವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಎನ್ಎಸ್ಎಸ್ ಅಧಿಕಾರಿ ಪ್ರೊ. ಆರ್. ಎಸ್. ನಾಯಕ ಸ್ವಚ್ಛತೆಯ ಮಹತ್ವವನ್ನು ತಿಳಿಸಿದರು.

ನಂತರ ಗ್ರಾಮಪಂಚಾಯತದ ಕಾರ್ಯಾಲಯದಲ್ಲಿ ನಡೆದ ಗಾಂಧೀ ಜಯಂತಿ ಸಮಾರಂಭದಲ್ಲಿ ಸ್ವಯಂಸೇವಕರೆಲ್ಲ ಅಧ್ಯಾಪಕರ ಜೊತೆ ಭಾಗವಹಿಸಿದ್ದು ವಿಶೇಷವಾಗಿತ್ತು. ಗ್ರಾಮಪಂಚಾಯತದ ಅಧ್ಯಕ್ಷರು, ಅಧಿಕಾರಿಗಳು, ಸಿಬ್ಬಂಧಿಗಳು ತುಂಬಾ ಆತ್ಮೀಯವಾಗಿ ಅಂಜುಮನ್ ಕಾಲೇಜಿನ ವಿದ್ಯಾರ್ಥಿಗಳನ್ನು, ಅಧ್ಯಾಪಕರನ್ನು ಬರಮಾಡಿಕೊಂಡರು. ಗ್ರಾಮಪಂಚಾಯತದಲ್ಲಿ ದೊರೆಯುವ ಸೇವೆ ಮತ್ತು ಅಲ್ಲಿ ನಡೆಯುವ ಕಾರ್ಯಕ್ರಮಗಳ ಸಂಕ್ಷಿಪ್ತ ಪರಿಚಯವೂ ಕಾಲೇಜು ವಿದ್ಯಾರ್ಥಿಗಳಿಗೆ ದೊರೆಯುವಂತಾಯಿತು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಕೆ. ಶೇಕ್, ಗಾಂಧೀಜಿಯವರ ಘನ ವ್ಯಕ್ತಿತ್ವವನ್ನು, ಅವರ ಸಿದ್ಧಾಂತಗಳನ್ನು ಜೊತೆಗೆ ಸ್ವಚ್ಛತೆಯ ಮಹತ್ವವನ್ನು ತಿಳಿಸಿದರು. ಗ್ರಾಮಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಮಹಾತ್ಮ ಗಾಂಧೀಜಿಯವರ ಸಂದೇಶಗಳನ್ನು ತಿಳಿಸುವುದರ ಜೊತೆಗೆ ನಮ್ಮ ಮನೆ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ಪ್ರತಿಯೊಬ್ಬ ನಾಗರಿಕರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

A grand event titled "Clean Sea, Safe Sea" by Anjuman College.

The directions of the Ministry of Youth Affairs and Sports, the National Service Scheme (NSS) and National Cadet Corps (NCC) units of Anjuman College, involving all teachers and students, in collaboration with Mavinakurve Gram Panchayat, successfully and meaningfully conducted the "Clean Sea, Safe Sea" program by cleaning the Mavinakurve beach near Bhatkal port.

On the last day of the fortnightly initiative 'Swachhata Hi Seva' or 'Cleanliness is Service' (02-10-2024), the NSS and NCC volunteers, along with other students, faculty, and staff members, participated in this large-scale event. They cleaned the beach by removing piled-up plastic waste and other garbage, making the beach beautiful.

The participation of Mavinakurve Gram Panchayat, along with our college, added further significance to the cleanliness drive. With the full cooperation of the Gram Panchayat, the "Clean Sea, Safe Sea" program became even more successful.

All the students collected more waste from the beach than the assigned limit for each student. The task of disposing of the collected waste was efficiently managed by the Mavinakurve Gram Panchayat. On this occasion, the NSS officer of the college, Prof. R. S. Nayak, explained the importance of cleanliness.

Later, a Gandhi Jayanti celebration was held at the Gram Panchayat office, where all volunteers, along with the faculty, participated. The President,

officials, and staff of the Gram Panchayat warmly welcomed the students and teachers of Anjuman College. The students were also given a brief introduction to the services and programs offered at the Gram Panchayat. During this event, the principal of the college, Prof. M. K. Sheikh, spoke about the great personality of Mahatma Gandhi, his principles, and the importance of cleanliness. Gram Panchayat Development Officers, while sharing the messages of Mahatma Gandhi, stressed that it is the primary duty of every citizen to keep their homes and surrounding areas clean.

NSS Programme Officer
Anjuman Arts, Science & Commerce
College, BHATKAL-581 320.

PRINCIPAL
Anjuman Arts. Science & Commerce College
& P.G. Centre
BHATKAL-581 320